**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹಣಮಂತ ಆರ್ ನಿರಾಣಿ ಇವರ ನಿಯಮ-72ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಸೂಚನೆ:**

ರಾಜ್ಯ ಹಾಗೂ ಉತ್ತರ ಕರ್ನಾಟಕ ಸೇರಿದಂತೆ ಹಲವಾರು ಪ್ರದೇಶಗಳಲ್ಲಿ ಮುಂಗಾರು ಪ್ರಾರಂಭವಾಗಿದ್ದರೂ ಸಹ ಈ ವರ್ಷ ಮಳೆ ಬಾರದೇ ಇರುವ ಕಾರಣ ರಾಜ್ಯದ ರೈತಾಪಿ ವರ್ಗ ತುಂಬಾ ಸಂಕಷ್ಟದಲ್ಲಿದ್ದಾರೆ. ಉತ್ತರ ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಅಣೆಕಟ್ಟುಗಳು, ನದಿಗಳು, ಕೆರೆ-ಕಟ್ಟೆಗಳು ಸಂಪೂರ್ಣವಾಗಿ ದಿನನಿತ್ಯ ಭತ್ತಿ ಹೋಗುತ್ತಿವೆ. ಆದ್ದರಿಂದ ರಾಜ್ಯ ಸರ್ಕಾರವು ಕೂಡಲೇ ಈ ನೈಸರ್ಗಿಕ ವಾತಾವರಣವನ್ನು ಗಮನಿಸಿ ಮುಂಗಾರು ಮಳೆ ವಿಫಲವಾದ ರಾಜ್ಯದ ಕೆಲವು ಜಿಲ್ಲೆಗಳನ್ನು "ಬರಗಾಲ ಪೀಡಿತ" ಪ್ರದೇಶವೆಂದು ಕೂಡಲೇ ಘೋಷಿಸಬೇಕೆಂದು, ನಾಡಿನ ರೈತರ ಸಂಕಷ್ಟಕ್ಕೆ ಮುಂದಾಗಬೇಕೆಂದು ನಾನು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

**ಮುಂಗಾರು ಮಳೆ ಪರಿಸ್ಥಿತಿ**

ರಾಜ್ಯದಲ್ಲಿ ಜೂನ್ 1 ರಿಂದ ಜುಲೈ 16 ರವರೆಗೆ 221 ಮಿ.ಮೀ ಮಳೆಯಾಗಿದ್ದು, ವಾಡಿಕೆ ಮಳೆ (336ಮಿ.ಮೀ)ಗೆ ಹೋಲಿಸಿದಾಗ ಶೇ.34 ರಷ್ಟು ಮಳೆ ಕೊರತೆಯಿದೆ.

**ಮಳೆ ಮುನ್ಸೂಚನೆ**

ಕಳೆದ ಒಂದು ವಾರದಿಂದ ರಾಜ್ಯದ ಕೆಲವೆಡೆ ಮುಂಗಾರು ಚುರುಕುಗೊಂಡಿದ್ದು, ಉತ್ತಮವಾಗಿ ಮಳೆಯಾಗುತ್ತಿರುವುದರಿಂದ ಜೂನ್ ಅಂತ್ಯಕ್ಕೆ ಶೇ.56 ರಷ್ಟಿದ್ದ ಮಳೆ ಕೊರತೆ ಇದೀಗ ಶೇ.34 ರಷ್ಟಿದೆ. ಮುಂದಿನ ಮೂರು ವಾರಗಳ ಮುನ್ಸೂಚನೆಯನ್ವಯ ರಾಜ್ಯದಲ್ಲಿ ಇನ್ನೂ ಉತ್ತಮ ಮಳೆಯಾಗುವ ಸಾಧ್ಯತೆ ಇದ್ದು, ಜುಲೈ 21 ರಿಂದ 27ರವರೆಗೆ ರಾಜ್ಯದ ಹಲವು ಭಾಗಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ.

**ಬರ ಘೋಷಣೆ ಕುರಿತು**

ಕೇಂದ್ರ ಸರ್ಕಾರದ ಬರ ಕೈಪಿಡಿ 2016ರನ್ವಯ ಬರ ಪೀಡಿತ ಘೋಷಣೆಗೆ ಕೇವಲ ಮಳೆ ಕೊರತೆಯಷ್ಟೇ ಮಾನದಂಡವಾಗುವುದಿಲ್ಲ. ಬರ ಘೋಷಣೆಗೆ ಇತರೆ ಮಾನದಂಡಗಳನ್ನು ನಿಗಧಿಮಾಡಿದೆ. ಮಾನದಂಡಗಳ ಆಧಾರದ ಮೇಲೆ ಬರಪೀಡಿತ ತಾಲ್ಲೂಕೆಂದು ಘೋಷಿಸಲಾಗುತ್ತದೆ.

ಪ್ರಸ್ತುತ ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲು ಕೊನೆಯ ಪಕ್ಷ ಮುಂಗಾರು ಆರಂಭದಿಂದ 2 ತಿಂಗಳ ಅವಧಿ ಪೂರ್ಣಗೊಳ್ಳಬೇಕು. ಅದರಂತೆ, ಜುಲೈ ಅಂತ್ಯಕ್ಕೆ ಬರ ಘೋಷಣೆ ಮಾಡಲಾಗುವುದು.

ಸಂಖ್ಯೆ: ಕಂಇ 357 ಟಿಎನ್ಆರ್ 2023

(ಕೃಷ್ಣ ಭೈರೇಗೌಡ)
ಕಂದಾಯ ಸಚಿವರು